ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ಮತ್ತು ವಿಜ್ಞಾನಗಳ ಸಂಸ್ಥೆ, ಹಾಸನ.
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: https://himshassan.karnataka.gov.in Phone/Fax No.08172-231699, 231599, Email:directorhims@yahoo.com

# 36ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

## ದಿನಾಂಕ: 12-12-2023ರಂದು ಮಂಗಳವಾರ

## ಸಂಜೆ: 4.00 ಗಂಟೆ

## : ಸ್ಥಳ :

## ಸುವರ್ಣ ವಿಧಾನ ಸೌಧ, ಬೆಳಗಾವಿ.

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ಮತ್ತು ವಿಜ್ಞಾನಗಳ ಸಂಸ್ಥೆ, ಹಾಸನ.
**HASSAN INSTITUTE OF MEDICAL SCIENCES, HASSAN**
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: https://himshassan.karnataka.gov.in/Phone/Fax No.08172-231699, 231599, Email:directorhims@yahoo.com

## 36ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

ದಿನಾಂಕ:12-12-2023ರಂದು ಮಂಗಳವಾರ, ಸಂಜೆ: 4.00 ಗಂಟೆಗೆ, ಮಾನ್ಯ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಸಭೆ, ಹಾಸನ ಇವರ ಘನ ಅಧ್ಯಕ್ಷತೆಯಲ್ಲಿ ಸುವರ್ಣ ವಿಧಾನ ಸೌಧ, ಬೆಳಗಾವಿಯಲ್ಲಿ ನಡೆದ 36ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ: 08** **ಹಾಜರಿದ್ದ ಸದಸ್ಯರ ಸಂಖ್ಯೆ: 05**

| | | | |
|---|---|---|---|
| 01 | ಮಾನ್ಯ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಸಭೆ, ಹಾಸನ | ಅಧ್ಯಕ್ಷರು | ಹಾಜರಿರುತ್ತಾರೆ |
| 02 | ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ , ಅಂಬೇಡ್ಕರ್ ವಿಧಿ, 6ನೇ ಮಹಡಿ, 4ನೇ ಗೇಟ್, ಬೆಂಗಳೂರು. | ಉಪಾಧ್ಯಕ್ಷರು | ಹಾಜರಿರುತ್ತಾರೆ |
| 03 | ಮಾನ್ಯ ಉಪಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, ಜಯನಗರ, ಬೆಂಗಳೂರು. | ಸದಸ್ಯರು | -- |
| 04 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಿರುತ್ತಾರೆ |



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | |
|---|---|---|---|
| 05 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ, ವಿಕಾಸ ಸೌಧ, ಬೆಂಗಳೂರು. | ಸದಸ್ಯರು | --- |
| 06 | ಮಾನ್ಯ ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,<br>ಕರ್ನಾಟಕ ಸರ್ಕಾರ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 07 | ಮಾನ್ಯ ಜಿಲ್ಲಾಧಿಕಾರಿಗಳು,<br>ಹಾಸನ ಜಿಲ್ಲೆ, ಹಾಸನ. | ಸದಸ್ಯರು | --- |
| 08 | ಸರ್ಕಾರದಿಂದ ನಾಮನಿರ್ದೇಶಿಸಲಾದ ವೈದ್ಯಕೀಯ<br>ಕ್ಷೇತ್ರದಲ್ಲಿ ತಜ್ಞತೆಯನ್ನು ಹೊಂದಿರುವ ಓರ್ವ ವ್ಯಕ್ತಿ | ಸರ್ಕಾರದಿಂದ<br>ನಾಮನಿರ್ದೇಶನವಾಗಿರುವುದಿಲ್ಲ | --- |
| 09 | ಸರ್ಕಾರದಿಂದ ನಾಮನಿರ್ದೇಶಿಸಲಾದ<br>ಓರ್ವ ಅಸಾಧಾರಣ ಸಾಮಾಜಿಕ ಕಾರ್ಯಕರ್ತ | ಸರ್ಕಾರದಿಂದ<br>ನಾಮನಿರ್ದೇಶನವಾಗಿರುವುದಿಲ್ಲ | --- |
| 10 | ಸರ್ಕಾರದಿಂದ ನಾಮನಿರ್ದೇಶಿಸಲಾದ ಮಾನ್ಯತೆ ಪಡೆದ<br>ಸರ್ಕಾರೇತರ ಸಂಸ್ಥೆಯ ಓರ್ವ ಅಸಾಧಾರಣ ಜ್ಞಾನವುಳ್ಳ ಮಹಿಳೆ | ಸರ್ಕಾರದಿಂದ<br>ನಾಮನಿರ್ದೇಶನವಾಗಿರುವುದಿಲ್ಲ | --- |
| 11 | ಮಾನ್ಯ ನಿರ್ದೇಶಕರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

| ಅಜೆಂಡಾ ಕ್ರಮಸಂಖ್ಯೆ | ವಿಷಯ | ತೀರ್ಮಾನ |
|---|---|---|
| 1 | ದಿನಾಂಕ:09-02-2023ರಂದು ನಡೆದ 35ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಅನುಪಾಲನಾ ವರದಿಯನ್ನು ಓದಿ ಅನುಮೋದಿಸುವ ಬಗ್ಗೆ. | ದಿನಾಂಕ:09-02-2023ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ 35ನೇ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ನಿರ್ಣಯಗಳಿಗೆ ಸಂಸ್ಥೆಯಿಂದ ವಹಿಸಿರುವ ಕ್ರಮಗಳ ಅನುಪಾಲನಾ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 2 | ದಿನಾಂಕ:07-01-2023 ರಂದು ನಡೆದ 29ನೇ ಆರ್ಥಿಕ ಸಮಿತಿ ಸಭೆ ಹಾಗೂ ದಿನಾಂಕ: 24-05-2023ರಂದು ನಡೆದ | ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:07-01-2023 ರಂದು ನಡೆದ 29ನೇ ಆರ್ಥಿಕ ಸಮಿತಿ ಸಭೆಯ 23 ಅಜೆಂಡಾಗಳು ಮತ್ತು ದಿನಾಂಕ: 24-05-2023 ರಂದು ನಡೆದ 30ನೇ ಆರ್ಥಿಕ ಸಮಿತಿ ಸಭೆಯ 39 ಅಜೆಂಡಾಗಳ ನಡವಳಿಗಳನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. |



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| | 30ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳನ್ನು ಅನುಮೋದಿಸುವ ಬಗ್ಗೆ. | ದಿನಾಂಕ: 07-01-2023 ರಂದು ನಡೆದ 29ನೇ ಆರ್ಥಿಕ ಸಮಿತಿ ಸಭೆ ಮತ್ತು ದಿನಾಂಕ: 24-05-2023 ರಂದು ನಡೆದ 30ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು ಈ ಪೈಕಿ<br>➢ ದಿನಾಂಕ: 07-01-2023 ರಂದು ನಡೆದ 29ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು ಅಜೆಂಡಾ ಕ್ರಮಸಂಖ್ಯೆ: 10ರಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡಕ್ಕೆ ಕಟ್ಟಡದ ನೆಲ ಮತ್ತು ಮೊದಲನೇ ಅಂತಸ್ತಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ರೂ.390.00 ಲಕ್ಷಗಳನ್ನು ಕೋರಿರುವುದರ ಬಗ್ಗೆ ಹಾಗೂ ಸದರಿ ಕಟ್ಟಡಕ್ಕೆ ರೋಗಿಗಳ ಚಿಕಿತ್ಸೆಗೆ ಅವಶ್ಯಕವಿರುವ ಯಂತ್ರೋಪಕರಣಗಳ ಖರೀದಿಗೆ ರೂ.1166.00 ಲಕ್ಷಗಳು ಅವಶ್ಯಕತೆ ಇರುವುದರ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಈ ಬಗ್ಗೆ ಪ್ರತ್ಯೇಕವಾಗಿ ವಿಶೇಷ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶಕರಿಗೆ ಸೂಚನೆ ನೀಡಲಾಯಿತು.<br>ಹಾಗೂ<br>➢ ದಿನಾಂಕ: 07-01-2023 ರಂದು ನಡೆದ 29ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು ಅಜೆಂಡಾ ಕ್ರಮಸಂಖ್ಯೆ: 18ರ ಬಗ್ಗೆ ಅವಲೋಕಿಸಲಾಯಿತು. ಫೆಲೋಶಿಪ್ ಕೋರ್ಸ್‌ಗಳನ್ನು ಪುನರ್ ಪ್ರಾರಂಭಿಸಿಲು ದಿನಾಂಕ: 24-03-2023 ರಂದು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸಂಸ್ಥೆಯ ಗುಣಮಟ್ಟ ಕಾರ್ಯನಿರ್ವಹಣೆಗೆ ಸದರಿ ಕೋರ್ಸ್‌ಗಳು ಅವಶ್ಯಕತೆ ಇರುವುದರಿಂದ ಈ ಬಗ್ಗೆ ತುರ್ತಾಗಿ ಅನುಮೋದನೆ ನೀಡಲು ಸಂಸ್ಥೆಯ ನಿರ್ದೇಶಕರು ಕೋರಿದರು. ಸಭೆಯಲ್ಲಿ ನಿರ್ದೇಶಕರ ಕೋರಿಕೆಗೆ ಸಮ್ಮತಿ ನೀಡಿದರು. |
| 3 | ದಿನಾಂಕ:09-12-2022 ರಂದು ನಡೆದ 32ನೇ ಖರೀದಿ ಸಮಿತಿ ಸಭೆ, ದಿನಾಂಕ: 24-05-2023 ರಂದು ನಡೆದ 33ನೇ ಖರೀದಿ ಸಮಿತಿ ಸಭೆ, ಹಾಗೂ ದಿನಾಂಕ:28-08-2023ರಂದು ನಡೆದ 34ನೇ ಖರೀದಿ ಸಮಿತಿ ಸಭೆಯ ಸಭಾ ನಡವಳಿಗಳನ್ನು ಅನುಮೋದಿಸುವ ಬಗ್ಗೆ. | ಮಾನ್ಯ ನಿರ್ದೇಶಕರು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:09-12-2022ರಂದು ನಡೆದ 32ನೇ ಖರೀದಿ ಸಮಿತಿ ಸಭೆ, ದಿನಾಂಕ: 24-05-2023 ರಂದು ನಡೆದ 33ನೇ ಖರೀದಿ ಸಮಿತಿ ಸಭೆ, ದಿನಾಂಕ: 28-08-2023 ರಂದು ನಡೆದ 34ನೇ ಖರೀದಿ ಸಮಿತಿ ಸಭೆಯ ಸಭಾ ನಡವಳಿಗಳನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ದಿನಾಂಕ:09-12-2022 ರಂದು ನಡೆದ 32ನೇ ಖರೀದಿ ಸಮಿತಿ ಸಭೆ, ದಿನಾಂಕ: 24-05-2023 ರಂದು ನಡೆದ 33ನೇ ಖರೀದಿ ಸಮಿತಿ ಸಭೆ, ದಿನಾಂಕ: 28-08-2023 ರಂದು ನಡೆದ 34ನೇ ಖರೀದಿ ಸಮಿತಿ ಸಭೆಯ ಸಭಾ ನಡವಳಿಗಳನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 04 | ದಿನಾಂಕ:24.05.2023 ಮತ್ತು 16.09.2023 ರಂದು ನಡೆದ | ದಿನಾಂಕ:24.05.2023 ಮತ್ತು 16.09.2023 ರಂದು ಸಂಸ್ಥೆಯ ಬೋಧಕ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿದ್ದು, ಸದರಿ ಸಭೆಯಲ್ಲಿ |



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | ವಿಷಯ | ವಿವರ |
|---|---|---|
| | ಸಂಸ್ಥೆಯ ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಯಲ್ಲಿ ಮುಂಬಡ್ತಿ ಪಡೆದ ಬೋಧಕ ಸಿಬ್ಬಂದಿಗಳ ಪಟ್ಟಿಯನ್ನು ಅನುಮೋದಿಸುವ ಬಗ್ಗೆ. | ಮುಂಬಡ್ತಿಗೆ ಅರ್ಹರಿದ್ದ ಬೋಧಕ ಸಿಬ್ಬಂದಿಗಳ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅರ್ಹತೆ ಹೊಂದಿರುವ ಈ ಕೆಳಕಂಡ ಬೋಧಕ ಸಿಬ್ಬಂದಿಗಳನ್ನು ಖಾಲಿ ಇರುವ ಹುದ್ದೆಗಳಿಗೆ ನಿಯಮಾನುಸಾರ ಮುಂಬಡ್ತಿ ನೀಡಲು ತೀರ್ಮಾನಿಸಲಾಗಿರುತ್ತದೆ ಸದರಿ ತೀರ್ಮಾನವನ್ನು ಅನುಮೋದನೆಗಾಗಿ ಸಂಸ್ಥೆಯ ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. |

**ದಿನಾಂಕ:24.05.2023ರ ಮುಂಬಡ್ತಿ ಮೂಲಕ ಆಯ್ಕೆಯಾದ ಸಿಬ್ಬಂದಿಗಳ ವಿವರ**

| ಕ್ರ.ಸಂ. | ಹೆಸರು ಮತ್ತು ಪದನಾಮ | ವಿಭಾಗ | ಪದೋನ್ನತಿ ನೀಡಿದ ಹುದ್ದೆ |
|---|---|---|---|
| 01 | ಡಾ.ದೀಪಕ್.ಪಿ<br>ಸಹ ಪ್ರಾಧ್ಯಾಪಕರು | ಔಷಧಶಾಸ್ತ್ರ ವಿಭಾಗ | ಪ್ರಾಧ್ಯಾಪಕರು |
| 02 | ಡಾ.ಬಿಂದು.ಸಿ.ಬಿ.<br>ಸಹ ಪ್ರಾಧ್ಯಾಪಕರು | ವೈದ್ಯಶಾಸ್ತ್ರ ವಿಭಾಗ | ಪ್ರಾಧ್ಯಾಪಕರು |
| 03 | ಡಾ.ಸಹನಾ.ಜಿ.ಎನ್.<br>ಸಹಾಯಕ ಪ್ರಾಧ್ಯಾಪಕರು | ಔಷಧಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕರು |
| 04 | ಡಾ.ರವಿ ಟಿ ಚಿಕ್ಕಣ್ಣನವರ್<br>ಸಹಾಯಕ ಪ್ರಾಧ್ಯಾಪಕರು | ವೈದ್ಯಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕರು |

**ದಿನಾಂಕ:16.09.2023ರ ಮುಂಬಡ್ತಿ ಮೂಲಕ ಆಯ್ಕೆಯಾದ ಸಿಬ್ಬಂದಿಗಳ ವಿವರ**

| ಕ್ರ.ಸಂ. | ಹೆಸರು ಮತ್ತು ಪದನಾಮ | ವಿಭಾಗ | ಪದೋನ್ನತಿ ನೀಡಿದ ಹುದ್ದೆ |
|---|---|---|---|
| 01 | ಡಾ.ಪುರುಷೋತ್ತಮ್.ಆರ್.<br>ಸಹ ಪ್ರಾಧ್ಯಾಪಕರು | ರೋಗಲಕ್ಷಣಶಾಸ್ತ್ರ ವಿಭಾಗ | ಪ್ರಾಧ್ಯಾಪಕರು |
| 02 | ಡಾ.ಮನುಪ್ರಕಾಶ್.ಎಸ್.ಕೆ<br>ಸಹ ಪ್ರಾಧ್ಯಾಪಕರು | ಮಕ್ಕಳ ಚಿಕಿತ್ಸಾ ವಿಭಾಗ | ಪ್ರಾಧ್ಯಾಪಕರು |
| 03 | ಡಾ.ಪ್ರೀತಾ ನಾಯ್ಕ್<br>ಸಹಾಯಕ ಪ್ರಾಧ್ಯಾಪಕರು | ರೋಗಲಕ್ಷಣಶಾಸ್ತ್ರ ವಿಭಾಗ | ಸಹ ಪ್ರಾಧ್ಯಾಪಕರು |
| 04 | ಡಾ.ಕುಮಾರ್.ಎಸ್.ಆರ್<br>ಸಹಾಯಕ ಪ್ರಾಧ್ಯಾಪಕರು | ಮಕ್ಕಳ ಚಿಕಿತ್ಸಾ | ಸಹ ಪ್ರಾಧ್ಯಾಪಕರು |

<u>**ತೀರ್ಮಾನ:**</u>

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ದಿನಾಂಕ:24.05.2023 ಮತ್ತು 16.09.2023 ನಡೆದ



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><td></td><td></td><td>ಸಂಸ್ಥೆಯ ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಗಳಲ್ಲಿ ಅರ್ಹ ಒಟ್ಟು 08 ಬೋಧಕ ಸಿಬ್ಬಂದಿಗಳಿಗೆ ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆಮೇರೆಗೆ ನಿಯಮಾನುಸಾರ ಮುಂಬಡ್ತಿ ನೀಡಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.</td></tr>
<tr><td>05</td><td>ದಿನಾಂಕ:06.12.2021 ಮತ್ತು 07.12.2021ರಂದು ನಡೆದ ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನಡೆದ ನೇರ ನೇಮಕಾತಿ ಸಂದರ್ಶನದಲ್ಲಿ ಆಯ್ಕೆಯಾಗಿ ನೇಮಕಾತಿ ಹೊಂದಿ ಕರ್ತವ್ಯಕ್ಕೆ ವರದಿ ಮಾಡಿ ಕೊಂಡಿರುವುದನ್ನು ಅನುಮೋದಿಸುವ ಬಗ್ಗೆ.</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳಾದ ಪ್ರಾಧ್ಯಾಪಕರು :02, ಸಹ ಪ್ರಾಧ್ಯಾಪಕರು :01, ಸಹಾಯಕ ಪ್ರಾಧ್ಯಾಪಕರು:21, ಮತ್ತು ಬೋಧಕೇತರ ಸಿಬ್ಬಂದಿಯ ಹುದ್ದೆಯಾದ ಮಹಿಳಾ ವೈದ್ಯಾಧಿಕಾರಿಗಳ :02 ಹುದ್ದೆಗಳಿಗೆ ದಿನಾಂಕ:29.10.2021 ರಂದು ನೇರ ಸಂದರ್ಶನಕ್ಕೆ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿರುತ್ತದೆ.<br><br>ಸಂಸ್ಥೆಯ ಬೈಲಾ 2014 ನಿಯಮ (12)ರಡಿ ರಚಿತವಾದ ಆಯ್ಕೆ ಸಮಿತಿಯು, ದಿನಾಂಕ: 06.12.2021 &07.12.2021 ರಂದು ನೇರ ಸಂದರ್ಶನ ನಡೆಸಿದ್ದು, ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಗೆ ಅನುಮೋದನೆ ಪಡೆಯಲು ಸರ್ಕಾರಕ್ಕೆ ಇ–ಕಡತವನ್ನು ಸಲ್ಲಿಸಿದ್ದು, ಸದರಿ ಆಯ್ಕೆ ಪಟ್ಟಿಗೆ ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಹಾಗೂ ಅಧ್ಯಕ್ಷರು, ಹಿಮ್ಸ್, ಆಡಳಿತ ಮಂಡಳಿ ಮತ್ತು ಸರ್ಕಾರದ ಮಾನ್ಯ ಅಪರ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಹಾಗೂ ಉಪಾಧ್ಯಕ್ಷರು, ಹಿಮ್ಸ್, ಆಡಳಿತ ಮಂಡಳಿ ಇವರುಗಳ ಅನುಮೋದನೆಯಂತೆ, ಸರ್ಕಾರದ ಪತ್ರ ಸಂಖ್ಯೆ: ಎಂಇಡಿ 197 ಕೆಯುಎಂ 2022, ದಿನಾಂಕ:21.10.2023ರ ಪತ್ರದಂತೆ ಆಯ್ಕೆಯಾಗಿರುವ ಅಭ್ಯರ್ಥಿಗಳ ವಿವರ ಈ ಕೆಳಕಂಡಂತಿರುತ್ತದೆ. ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳಿಗೆ ಸಂಸ್ಥೆಯಿಂದ ನೇಮಕಾತಿ ಆದೇಶ ಜಾರಿಗೊಳಿಸಲಾಗಿದ್ದು, ಆಯ್ಕೆಯಾದ ಅಭ್ಯರ್ಥಿಗಳಲ್ಲಿ 14 ಬೋಧಕ ಸಿಬ್ಬಂದಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ ಉಳಿದ 03+ 01 ಹುದ್ದೆಗಳು ಖಾಲಿ ಉಳಿದಿರುತ್ತದೆ. ಸದರಿ ವಿಷಯವನ್ನು ಅನುಮೋದನೆಗಾಗಿ ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿದರು.<br><br><u>ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾಗಿರುವವರ ಪಟ್ಟಿ:</u>
<table>
<tr><th>ಕ್ರ. ಸಂ.</th><th>ಹೆಸರು</th><th>ಆಯ್ಕೆಯಾದ ಮೀಸಲಾತಿ</th><th>ಆಯ್ಕೆಯಾದ ವಿಭಾಗ</th><th>ಷರಾ</th></tr>
<tr><td>1</td><td>ಡಾ.ಸಂಧ್ಯಾ.ಎಂ</td><td>ಸಾಮಾನ್ಯ(ಮ)</td><td>ಪೆಥಾಲಜಿ</td><td>ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ.</td></tr>
<tr><td>2</td><td>ಡಾ.ಭಾವಿಕಾ.ವೈ.ಎಂ</td><td>ಸಾಮಾನ್ಯ(ಮ)</td><td>ಮಕ್ಕಳ ಚಿಕಿತ್ಸಾ</td><td>ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ.</td></tr>
<tr><td>3</td><td>ಡಾ.ಮಧುರಾ.ಎ.ಆರ್.</td><td>ಸಾಮಾನ್ಯ(ಮ)</td><td>ಜನರಲ್ ಮೆಡಿಸಿನ್</td><td>ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ.</td></tr>
</table></td></tr>
</table>



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | | | | |
|---|---|---|---|---|---|---|
| | | 4 | ಡಾ.ಅನುಪಮ.ಎಂ.ಕೆ | ಸಾಮಾನ್ಯ(ಮ) | ಅರಿವಳಿಕೆ | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |
| | | 5 | *ಡಾ.ಮಾನಸ.ಎಸ್ | ಸಾಮಾನ್ಯ(ಮ) | ಅರಿವಳಿಕೆ | *ಕರ್ತವ್ಯ ವರದಿ ಮಾಡಿಕೊಂಡಿರುವುದಿಲ್ಲ |
| | | 6 | ಡಾ.ಸಂತೋಷ್.ಜೆ.ಬಿ | ಸಾಮಾನ್ಯ (ಗ್ರಾಮೀಣ) | ಕೀಲು ಮತ್ತು ಮೂಳೆ ಚಿಕಿತ್ಸಾ | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |
| | | 7 | ಡಾ.ಪ್ರಜ್ವಲ್.ಆರ್.ಕೆ | ಸಾಮಾನ್ಯ (ಗ್ರಾಮೀಣ) | ಜನರಲ್ ಸರ್ಜರಿ | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |
| | | 8 | ಡಾ.ಚಂದನ್.ಎ.ಇ | ಸಾಮಾನ್ಯ | ಕೀಲು ಮತ್ತು ಮೂಳೆ ಚಿಕಿತ್ಸಾ | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |
| | | 9 | ಡಾ.ಸಚಿನ್.ಟಿ | ಸಾಮಾನ್ಯ | ರೇಡಿಯಲಾಜಿ | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |
| | | 10 | ಡಾ.ಮಧು.ಜಿ | ಸಾಮಾನ್ಯ | ಜನರಲ್ ಮೆಡಿಸಿನ್ | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |
| | | 11 | *ಡಾ.ಅಜಯ್.ಜಿ.ವಿ | ಸಾಮಾನ್ಯ (ಅಂಗವಿಕಲ) | ರೇಡಿಯೋಥೆರಫಿ | * ಕರ್ತವ್ಯ ವರದಿ ಮಾಡಿಕೊಂಡಿರುವುದಿಲ್ಲ |
| | | 12 | *ಡಾ.ರಘು.ಜಿ | ಸಾಮಾನ್ಯ (ಕನ್ನಡಮಾಧ್ಯಮ) | ಜನರಲ್ ಮೆಡಿಸಿನ್ | * ಕರ್ತವ್ಯ ವರದಿ ಮಾಡಿಕೊಂಡಿರುವುದಿಲ್ಲ |
| | | 13 | ಡಾ.ಮೊಯಿನುದ್ದಿನ್ ಬಾಷಾ.ಕೆ | IIB | ಕೀಲು ಮತ್ತು ಮೂಳೆ ಚಿಕಿತ್ಸಾ | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |
| | | 14 | ಡಾ.ಹೇಮಂತ್ ಆರ್ | IIA | ಕೀಲು ಮತ್ತು ಮೂಳೆ ಚಿಕಿತ್ಸಾ | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |
| | | 15 | ಡಾ.ಸಂತೋಷ್‌ಕುಮಾರ್ ರಜಪೂತ್.ಕೆ | ಎಸ್.ಸಿ | ಜನರಲ್ ಸರ್ಜರಿ | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |
| | | 16 | ಡಾ.ಪ್ರೀತಿ.ಹೆಚ್.ಎನ್ | ಸಾಮಾನ್ಯ(ಮ) | ಅರಿವಳಿಕೆ | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |

ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| | | | | |
|---|---|---|---|---|
| **ಲೇಡಿ ಮೆಡಿಕಲ್ ಅಫೀಸರ್** | | | | |
| | *ಡಾ.ಕಾವೇರಿ.ಜಿ | ಎಸ್.ಸಿ (ಸಾಮಾನ್ಯ ) | – | * ಕರ್ತವ್ಯ ವರದಿ ಮಾಡಿಕೊಂಡಿರುವುದಿಲ್ಲ |
| **ಕ್ಲಿನಿಕಲ್ ಸೈಕಾಲಾಜಿಸ್ಟ್** | | | | |
| | ಮಧುಶ್ರೀ.ಎ.ವೈ | ಸಾಮಾನ್ಯ | ಮನೋವೈದ್ಯಶಾಸ್ತ್ರ | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |
| **ಗುತ್ತಿಗೆ ಆಧಾರದಲ್ಲಿ ನೇಮಕಾತಿ ಹೊಂದಿರುವವರ ಪಟ್ಟಿ** | | | | |
| **ವಿ.ಆರ್.ಡಿ.ಎಲ್– ರಿಸರ್ಚ್ ಸೈಂಟಿಸ್ಟ್(ಮೆಡಿಕಲ್)** | | | | |
| | ತಾಜುನ್ನೀಸಾ.ಎಂ | ಸಾಮಾನ್ಯ | ವಿ.ಆರ್.ಡಿ.ಎಲ್ ರಿಸರ್ಚ್‌ಸೈಂಟಿಸ್ಟ್ (ಬಿ) | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |
| | ಯಲ್ಲಪ್ಪ ಸುಂಶಿ | ಸಾಮಾನ್ಯ | ಎಂ.ಆರ್.ಯು. ರಿಸರ್ಚ್‌ಸೈಂಟಿಸ್ಟ್ (ಬಿ) | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |
| | ಡಾ.ಮದನ್.ಎಸ್ | ಸಾಮಾನ್ಯ | ಎಂ.ಆರ್.ಯು. ರಿಸರ್ಚ್ ಸೈಂಟಿಸ್ಟ್(ಸಿ) | ಕರ್ತವ್ಯ ವರದಿ ಮಾಡಿಕೊಂಡಿರುತ್ತಾರೆ. |

**ತೀರ್ಮಾನ:**

ದಿನಾಂಕ:06.12.2021 & 07.12.2021 ರಂದು ನಡೆದ ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನಡೆದ ನೇರ ನೇಮಕಾತಿ ಸಂದರ್ಶನದಲ್ಲಿ ಆಯ್ಕೆಯಾಗಿ ನೇಮಕಾತಿ ಹೊಂದಿ ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.

| | | |
|---|---|---|
| 06 | ಅ)ಡಾ.ವೆಂಕಟೇಶ್.ಕೆ.ಬಿ., ಹಿರಿಯ ಸ್ಥಾನೀಯ ವೈದ್ಯರು, ವೈದ್ಯಶಾಸ್ತ್ರ ವಿಭಾಗ, ಹಿಮ್ಸ್, ಹಾಸನ ಇವರ ಉನ್ನತ | ಅ) ಡಾ.ವೆಂಕಟೇಶ್.ಕೆ.ಬಿ., ಹಿರಿಯ ಸ್ಥಾನೀಯ ವೈದ್ಯರು ವೈದ್ಯಶಾಸ್ತ್ರ ವಿಭಾಗ ಇವರು ಸೇವಾನಿರತ ಕೋಟಾದಡಿದಡಿಯಲ್ಲಿ ಎಂ.ಡಿ. ವೈದ್ಯಶಾಸ್ತ್ರ ವಿಭಾಗದ ಸ್ನಾತಕೋತ್ತರ ಪದವಿ ವ್ಯಾಸಂಗಕ್ಕೆ ಆಯ್ಕೆಗೊಂಡು ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ ವೈದ್ಯಕೀಯ ಕಾಲೇಜಿಗೆ ಪ್ರವೇಶಾತಿ ಹೊಂದಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 196 ಕೆಯುಎಂ 2022, ದಿನಾಂಕ:29.12.2022ರ ಪ್ರಕಾರ ಆಡಳಿತ |



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| | ವ್ಯಾಸಂಗದ ನಿಯೋಜನೆಯನ್ನು ಅನುಮೋದಿಸುವ ಬಗ್ಗೆ.<br>ಮತ್ತು<br>ಆ)ಡಾ.ಸಂದೇಶ್.ಎಂ.ಬಿ., ತುರ್ತು ಚಿಕಿತ್ಸಾ ವೈದ್ಯರು, ಹಿಮ್ಸ್, ಹಾಸನ ಇವರ ಉನ್ನತ ವ್ಯಾಸಂಗದ ನಿಯೋಜನೆಯನ್ನು ಅನುಮೋದಿಸುವ ಬಗ್ಗೆ. | ಮಂಡಳಿಯ ಘಟನೋತ್ತರ ಅನುಮೋದನೆ ಷರತ್ತಿಗೆ ಒಳಪಟ್ಟು ಬಿಡುಗಡೆಗೊಳಿಸಲು ಆದೇಶವಾಗಿರುತ್ತದೆ. ಸಂಸ್ಥೆಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಹಿಮ್ಸ್/ಸಿ(2)/03/2017–18, ದಿನಾಂಕ:20–01–2023ರ ಪ್ರಕಾರ ಡಾ.ವೆಂಕಟೇಶ್.ಕೆ.ಬಿ., ಇವರನ್ನು ಈ ಸಂಸ್ಥೆಯ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುತ್ತದೆ. ಸೇವಾನಿರತ ಉನ್ನತ ವ್ಯಾಸಂಗಕ್ಕೆ ನಿಯೋಜಿಸಿರುವುದನ್ನು<br>ಹಾಗೂ<br>ಆ) ಡಾ.ಸಂದೇಶ್.ಎಂ.ಬಿ., ತುರ್ತುಚಿಕಿತ್ಸಾ ವೈದ್ಯರು ಇವರು ಸೇವಾನಿರತ ಕೋಟಾದಡಿದಡಿಯಲ್ಲಿ ಎಂ.ಎಸ್., ಕೀಲು ಮತ್ತು ಮೂಳೆ ಚಿಕಿತ್ಸಾ ವಿಭಾಗಕ್ಕೆ ಸ್ನಾತಕೋತ್ತರ ಪದವಿ ವ್ಯಾಸಂಗಕ್ಕೆ ಆಯ್ಕೆಗೊಂಡು ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ ವೈದ್ಯಕೀಯ ಕಾಲೇಜಿಗೆ ಪ್ರವೇಶಾತಿ ಹೊಂದಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 195 ಕೆಯುಎಂ 2022, ದಿನಾಂಕ:29.12.2022ರ ಪ್ರಕಾರ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಷರತ್ತಿಗೆ ಒಳಪಟ್ಟು ಬಿಡುಗಡೆಗೊಳಿಸಲು ಆದೇಶವಾಗಿರುತ್ತದೆ. ಸಂಸ್ಥೆಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಹಿಮ್ಸ್/ಸಿ(2)/03/2017–18, ದಿನಾಂಕ:20–01–2023ರ ಪ್ರಕಾರ ಡಾ.ಸಂದೇಶ್.ಎಂ.ಬಿ., ಇವರನ್ನು ಈ ಸಂಸ್ಥೆಯ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುತ್ತದೆ. ಸೇವಾನಿರತ ಉನ್ನತ ವ್ಯಾಸಂಗಕ್ಕೆ ನಿಯೋಜಿಸಿರುವ ವಿಷಯವನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿದರು.<br>**<u>ತೀರ್ಮಾನ:</u>**<br>ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಡಾ.ವೆಂಕಟೇಶ್.ಕೆ.ಬಿ., ಹಿರಿಯ ಸ್ಥಾನೀಯ ವೈದ್ಯರು ವೈದ್ಯಶಾಸ್ತ್ರ ವಿಭಾಗ, ಹಿಮ್ಸ್, ಹಾಸನ ಇವರನ್ನು ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ ಇಲ್ಲಿಗೆ 03 ವರ್ಷಗಳ ಅವಧಿಗೆ ಎಂ.ಡಿ ಜನರಲ್ ಮೆಡಿಸಿನ್ ಉನ್ನತ ವ್ಯಾಸಂಗಕ್ಕೆ ನಿಯೋಜಿಸಿರುವುದನ್ನು ಮತ್ತು ಡಾ.ಸಂದೇಶ್.ಎಂ.ಬಿ., ತುರ್ತುಚಿಕಿತ್ಸಾ ವೈದ್ಯರು ಹಿಮ್ಸ್, ಹಾಸನ. ಇವರನ್ನು ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ ಇಲ್ಲಿಗೆ 03 ವರ್ಷಗಳ ಅವಧಿಗೆ ಎಂ.ಎಸ್. ಕೀಲು ಮತ್ತು ಮೂಳೆ ಚಿಕಿತ್ಸಾ ವಿಭಾಗದ ಸ್ನಾತಕೋತ್ತರ ಕೋರ್ಸಿನ ಉನ್ನತ ವ್ಯಾಸಂಗಕ್ಕೆ ಆಡಳಿತ ಮಂಡಳಿ ಸಭೆಯ ಘಟನೋತ್ತರ ನಿರೀಕ್ಷಣೆಯ ಮೇರೆಗೆ ಸೇವನಿರತ ಕೋಟಾದಡಿ ಉನ್ನತ ವ್ಯಾಸಂಗಕ್ಕೆ ನಿಯೋಜಿಸಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 07 | ಡಾ.ಪೂಜ್ಯ.ಎ.ವಿ., ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು ಇವರಿಗೆ ವರ್ಗಾವಣೆ ಸಂಬಂಧ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ. | ಡಾ.ಪೂಜ್ಯ.ಎ.ವಿ., ತುರ್ತುಚಿಕಿತ್ಸಾ ವಿಭಾಗದ ವೈದ್ಯಾಧಿಕಾರಿಗಳು, ಹಿಮ್ಸ್, ಹಾಸನ ಇವರು ಕೌಟುಂಬಿಕ ಕಾರಣ ಹಿನ್ನಲೆಯಲ್ಲಿ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿಗೆ ವರ್ಗಾವಣೆ ಮಾಡಿಕೊಡುವಂತೆ ಕೋರಿರುತ್ತಾರೆ. ಸದರಿಯವರಿಗೆ ನಿರಾಕ್ಷೇಪಣಾ ಪತ್ರ ನೀಡುವ ಕುರಿತು ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 129 ಆರ್ಐ 2023, ದಿನಾಂಕ:21.10.2023ರ ಆದೇಶವನ್ನು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯ ನೀಡುವಂತೆ ಸರ್ಕಾರದ ಪತ್ರ ಸಂಖ್ಯೆ: ಎಂಇಡಿ 105 ಕೆಯುಎಂ 2023(2) ದಿನಾಂಕ: 22.11.2023.ಪತ್ರದಲ್ಲಿ ಸೂಚಿಸಿರುತ್ತಾರೆ. ಸದರಿಯವರು ಬೋಧಕೇತರ ಹುದ್ದೆಯ ವೃಂದಕ್ಕೆ ಸೇರಿದವರಾಗಿರುತ್ತಾರೆ. |



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| | | ಸರ್ಕಾರದ ಮಾರ್ಗಸೂಚಿಗಳನ್ನು ಪರಿಶೀಲಿಸಲಾಗಿ 1)ಖಾಯಂ ಪೂರ್ವ ಸೇವಾವಧಿಯನ್ನು ಪೂರೈಸಿರಬೇಕು. 2)ವರ್ಗಾವಣೆಗೊಂಡ ಸಂಸ್ಥೆಗಳಲ್ಲಿ ಆಯಾಯ ವೃಂದದಲ್ಲಿ ಜೇಷ್ಠತೆಯಲ್ಲಿ ಕಿರಿಯವರಾಗುತ್ತಾರೆಂದು 3)ಆಯಾಯ ವೃಂದ ಬಲದಲ್ಲಿ ಶೇಕಡ 80ರಷ್ಟು ಲಭ್ಯವಿರುವುದನ್ನು ಖಚಿತಪಡಿಸಿಕೊಂಡು ನಿರಾಕ್ಷೇಪಣಾ ನೀಡಲು ಕ್ರಮವಹಿಸುವುದು. 4)ಬೋಧಕೇತರ ಸಿಬ್ಬಂದಿಗೆ ಏಕವ್ಯಕ್ತಿ ವರ್ಗಾವಣೆಗೆ ಅವಕಾಶವಿರುತ್ತದೆಂದು ಮಾರ್ಗಸೂಚಿಯಲ್ಲಿ ಇರುತ್ತದೆ.<br>ಬೋಧಕೇತರ ಹುದ್ದೆಗಳಿಗೆ ಏಕವ್ಯಕ್ತಿ ವರ್ಗಾವಣೆಗೆ ಅವಕಾಶವಿರುವುದರಿಂದ ಹಾಗೂ ಇವರು ಕೌಟಂಬಿಕ ಹಿನ್ನೆಲೆಯಲ್ಲಿ ವರ್ಗಾವಣೆ ಹೊಂದಲು ನಿರಾಕ್ಷೇಪಣಾ ಪತ್ರ ನೀಡುವಂತೆ ಕೋರಿರುವುದನ್ನು ಸಂಸ್ಥೆಯ ನಿರ್ದೇಶಕರು ಆಡಳಿತ ಮಂಡಳಿ ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>**ತೀರ್ಮಾನ:**<br>ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಡಾ.ಪೂಜ್ಯ.ಎ.ವಿ., ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು ಇವರಿಗೆ ಅತ್ತೆ, ಮಾವಂದಿರ ಅನಾರೋಗ್ಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ವರ್ಗಾವಣೆ ಸಂಬಂಧ ನಿರಾಕ್ಷೇಪಣಾ ಪತ್ರ ನೀಡುವುದೆಂದು ಒಪ್ಪಿ, ಖಾಲಿಯಾಗುವ ಸದರಿ ಹುದ್ದೆಯನ್ನು ಶೀಘ್ರವಾಗಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 08 | ಡಾ.ಹೇಮಲತಾ.ಜೆ, ಸಹಾಯಕ ಪ್ರಾಧ್ಯಾಪಕರು ರೋಗಲಕ್ಷಣ ಶಾಸ್ತ್ರ ವಿಭಾಗ ಇವರ 02 ವರ್ಷಗಳ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಣೆ ಮಾಡಿರುವುದನ್ನು ಅನುಮೋದಿಸುವ ಬಗ್ಗೆ. | ಡಾ.ಹೇಮಲತಾ.ಜೆ, ಸಹಾಯಕ ಪ್ರಾಧ್ಯಾಪಕರು ರೋಗಲಕ್ಷಣಶಾಸ್ತ್ರ ವಿಭಾಗ ಇವರನ್ನು ಎರಡು ವರ್ಷಗಳ ಪರೀಕ್ಷಾರ್ಥ ಅವಧಿಯ ಮೇರೆಗೆ ನೇಮಕಾತಿ ಮಾಡಿಕೊಳ್ಳಲಾಗಿದ್ದು, ದಿನಾಂಕ: 04.01.2020ರ ಪೂರ್ವಾಹ್ನ ದಿಂದ 22.02.2022ರ ಅಪರಾಹ್ನದ ಅವಧಿಗೆ ತೃಪ್ತಿಕರವಾಗಿ ಪೂರೈಸಿರುತ್ತಾರೆ ಎಂದು ಘೋಷಣೆ ಮಾಡಲಾಗಿರುತ್ತದೆ. ಇವರುಗಳು ಇಲಾಖಾ ಪರೀಕ್ಷೆಗಳನ್ನು ಹಾಗೂ ಕಡ್ಡಾಯ ಕನ್ನಡ ಪರೀಕ್ಷೆಯನ್ನು ತೇರ್ಗಡೆ ಹೊಂದಿರುತ್ತಾರೆ. ಬೋಧಕ ಸಿಬ್ಬಂದಿಯವರಿಗೆ ಕೆ.ಸಿ.ಎಸ್.ಆರ್. ನಿಯಾಮವಳಿ ಹಾಗೂ ಸಂಸ್ಥೆಯ ಬೈಲಾ ಪ್ರಕಾರ 02 ವರ್ಷಗಳ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆ ಎಂದು ಘೋಷಣೆ ಮಾಡಲಾಗಿರುತ್ತದೆ. ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಇರುವುದಿಲ್ಲ. ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡಿರುವುದನ್ನು ಸಂಸ್ಥೆಯ ನಿರ್ದೇಶಕರು ಆಡಳಿತ ಮಂಡಳಿ ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>**ತೀರ್ಮಾನ:**<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಡಾ.ಹೇಮಲತಾ.ಜೆ, ಸಹಾಯಕ ಪ್ರಾಧ್ಯಾಪಕರು ರೋಗಲಕ್ಷಣಶಾಸ್ತ್ರ ವಿಭಾಗ ಇವರ 02ವರ್ಷಗಳ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಣೆ ಮಾಡಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 09 | ಡಾ.ಮಾನಸದಾಸ್, ಸಹ ಪ್ರಾಧ್ಯಾಪಕರು, ರೋಗ ಲಕ್ಷಣ ಶಾಸ್ತ್ರ ವಿಭಾಗ , ಹಿಮ್ಸ್, | ಡಾ.ಮಾನಸದಾಸ್, ಸಹ ಪ್ರಾಧ್ಯಾಪಕರು, ರೋಗಲಕ್ಷಣಶಾಸ್ತ್ರ ವಿಭಾಗ, ಹಿಮ್ಸ್, ಹಾಸನ ಇವರನ್ನು ಸರ್ಕಾರದ ಅಧಿಸೂಚನೆ ಪತ್ರ ಸಂಖ್ಯೆ: ಎಂಇಡಿ 145 ಕೆಯುಎಂ 2022(1) ದಿನಾಂಕ:25.09.2023ರಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆವರ್ಗಾವಣೆ ಮಾಡಿ ಆದೇಶಿಸಲಾಗಿರುತ್ತದೆ. |



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| | ಹಾಸನ ಇವರನ್ನು ಸರ್ಕಾರವು ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಮಾಡಿರುವುದನ್ನು ಅನುಮೋದಿಸುವ ಬಗ್ಗೆ. | ಸರ್ಕಾರದ ಆದೇಶದಂತೆ ಡಾ.ಮಾನಸದಾಸ್, ಸಹ ಪ್ರಾಧ್ಯಾಪಕರು, ರೋಗಲಕ್ಷಣಶಾಸ್ತ್ರ ವಿಭಾಗ, ಹಿಮ್ಸ್, ಹಾಸನ ಇವರನ್ನು ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಹಿಮ್ಸ್ ಸಂಸ್ಥೆಯ ಕರ್ತವ್ಯದಿಂದ ದಿನಾಂಕ:07.10.2023ರ ಅಪರಾಹ್ನ ಬಿಡುಗಡೆಗೊಳಿಸಿರುವುದನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಆಡಳಿತ ಮಂಡಳಿ ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>**ತೀರ್ಮಾನ:**<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಡಾ.ಮಾನಸದಾಸ್, ಸಹ ಪ್ರಾಧ್ಯಾಪಕರು, ರೋಗಲಕ್ಷಣ ಶಾಸ್ತ್ರ ವಿಭಾಗ, ಹಿಮ್ಸ್, ಹಾಸನ ಇವರನ್ನು ಸರ್ಕಾರವು ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಮಾಡಿದ್ದು, ಸದರಿಯವನ್ನು ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಹಿಮ್ಸ್ ಸಂಸ್ಥೆಯ ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 10 | ಹಿಮ್ಸ್ ಸಂಸ್ಥೆಯ ಆವರಣದಲ್ಲಿ ನೂತನವಾಗಿ ನಿರ್ಮಾಣ ವಾಗಿರುವ 450 ಹಾಸಿಗೆಗಳ ಸಾಮರ್ಥ್ಯದ ಕಟ್ಟಡ ಕಾಮಗಾರಿ ಗಳನ್ನು ಪೂರ್ಣಗೊಳಿಸಿದ್ದು, ಸದರಿ ಕಟ್ಟಡವನ್ನು ಚಾಲನೆ ಗೊಳಿಸಲು ಮತ್ತು ಸದರಿ ಆಸ್ಪತ್ರೆಗೆ ಶ್ರೀ ಚಾಮರಾಜೇಂದ್ರ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಎಂದು ನಾಮಕರಣ ಮಾಡುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿರುವ ನಿರ್ಮಿಸಿರುವ ನೂತನ 450 ಹಾಸಿಗೆಗಳ ಆಸ್ಪತ್ರೆ ಕಟ್ಟಡವು ದಿನಾಂಕ:13.03.2023ರಂದು ಉದ್ಘಾಟನೆಯಾಗಿರುತ್ತದೆ. ಸಂಬಂಧಿತ ವಿಭಾಗಗಳ ಮುಖ್ಯಸ್ಥರೊಡನೆ ಹಲವಾರು ಸಭೆಗಳನ್ನು ನಡೆಸಿ ಸ್ಥಳಾಂತರಗೊಳಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಶ್ರೀ ಪಿ.ಎಂ.ವಾಸುದೇವ, Advocate & Consultant, Hassan ಇವರು ದಿನಾಂಕ:09.10.2023ರಂದು ಮನವಿ ಸಲ್ಲಿಸಿ ಸಾಮಾಜಿಕ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಸಲಹೆಯಂತೆ ಸದರಿ ಕಟ್ಟಡಕಕ್ಕೆ ಈ ಹಿಂದೆ ಇದ್ದ ಶ್ರೀ ಚಾಮರಾಜೇಂದ್ರ ಆಸ್ಪತ್ರೆ ಎಂಬ ಹೆಸರನ್ನೇ ಇಡಬೇಕೆಂದು ಮನವಿ ಪತ್ರದಲ್ಲಿ ಕೋರಿರುವ ವಿಷಯವನ್ನು ಸಂಸ್ಥೆಯ ನಿರ್ದೇಶಕರು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿದರು.<br>**ತೀರ್ಮಾನ:**<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ನೂತವಾಗಿ ನಿರ್ಮಾಣಗೊಂಡಿರುವ 450 ಹಾಸಿಗೆಗಳ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗೆ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯೆಂದು ಹೆಸರಿಡಲು ಆಡಳಿತ ಮಂಡಳಿಯಿಂದ ಅಭ್ಯಂತರವಿರುವುವಿಲ್ಲ. ಆದಾಗ್ಯೂ ಸ್ಥಳೀಯರ, ಸಂಘ, ಸಂಸ್ಥೆಗಳ ಹಾಗೂ ಜನಪ್ರತಿನಿಧಿಗಳ ಅಭಿಪ್ರಾಯ ಪಡೆದು ಕ್ರಮವಹಿಸುವುದು ಸೂಕ್ತ ಎಂದು ಅಭಿಪ್ರಾಯಿಸಿ ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನರವರು ಸ್ಥಳೀಯ ಸಂಘ-ಸಂಸ್ಥೆಗಳ ಮುಖಂಡರು ಹಾಗೂ ಜನಪ್ರತಿನಿಧಿಗಳೊಂದಿಗೆ ಸಭೆಯನ್ನು ನಡೆಸಿ ಅಗತ್ಯ ಕ್ರಮವಹಿಸುವಂತೆ ನಿರ್ದೇಶನ ನೀಡಲಾಯಿತು. |
| 11 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಂಪೌಂಡ್ ಗೋಡೆಯು ಬಿದ್ದು, ಶ್ರೀಮತಿ. ರತ್ನಮ್ಮ W/o ಮಹದೇವರವರಿಗೆ ದೈಹಿಕ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಟ್ಟಡ ನಿರ್ಮಾಣ ಸಮಯದಲ್ಲಿ ಕಾಂಪೌಂಡ್ ಗೋಡೆಯು ಬಿದ್ದು, ಶ್ರೀಮತಿ ರತ್ನಮ್ಮ W/o ಮಹದೇವ ರವರಿಗೆ ದೈಹಿಕ ಅಂಗಊನತೆ ಉಂಟಾಗಿದ್ದು, ಪರಿಹಾರ ಒದಗಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಹೆಚ್.ಎಸ್.ಡಿ.ಆರ್.ಪಿ. ಉಪ-ವಿಭಾಗ, ಶಿವಮೊಗ್ಗ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು, ಡೆಪ್ಯೂಟಿ ಕಮೀಷನರ್, ಹಾಸನ ಜಿಲ್ಲಾ ವೈದ್ಯಾಧಿಕಾರಿಗಳು, ಹಾಸನ ರವರುಗಳ ವಿರುದ್ಧ ದಾವೆ ಹೂಡಿದ್ದು, 1. ಒರಿಜಿನಲ್ ಸೂಟ್ ನಂ.127/2012 |



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| | ಅಂಗಊನತೆ ಉಂಟಾಗಿದ್ದು, ಪರಿಹಾರ ಮೊತ್ತ ರೂ.2,42,700/– ಗಳನ್ನು ಸರ್ಕಾರದ ನಿರ್ದೇಶನದಂತೆ ಪಾವತಿಸಿದ್ದು, ಘಟನೋತ್ತರ ಅನುಮೋದನೆ ಪಡೆಯುವ ಬಗ್ಗೆ. | ಶ್ರೀಮತಿ.ರತ್ನಮ್ಮ v/s ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಹೆಚ್.ಎಸ್.ಡಿ.ಆರ್.ಪಿ. ಉಪ–ವಿಭಾಗ, ಶಿವಮೊಗ್ಗ ಮತ್ತು ಇತರರು ಪತ್ರದಲ್ಲಿ ಸದರಿ ದಾವೆಯಲ್ಲಿ ಘನ ನ್ಯಾಯಾಲಯದಲ್ಲಿ ಶ್ರೀಮತಿ. ರತ್ನಮ್ಮ W/o ಮಹದೇವ ರವರಿಗೆ ರೂ.1,51,000.00 ಗಳ ಪರಿಹಾರವನ್ನು ದಿನಾಂಕ 01.11.2006 ರಿಂದ ವಾರ್ಷಿಕ ಶೇಕಡ 6%ರ ಬಡ್ಡಿಯಂತೆ ಪರಿಹಾರ ಒದಗಿಸುವಂತೆ ದಿನಾಂಕ:06.08.2016 ರಂದು ಘನ ನ್ಯಾಯಾಲಯವು ಆದೇಶಿಸಲಾಗಿರುತ್ತದೆ.<br>ಮುಂದುವರೆದು ಸದರಿ ವಿಷಯದ ಬಗ್ಗೆ ದಿನಾಂಕ:20.09.2023ರಂದು E.office no.HIMS/4/Dev/ HIMS-HSN ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸಂಸ್ಥೆಯ ಮುಂದಿನ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಸಂಸ್ಥೆಯ ಆಂತರಿಕ ಸಂಪನ್ಮೂಲದಿಂದ ಪಾವತಿಸುವಂತೆ, ಸರ್ಕಾರದ ಪತ್ರಸಂಖ್ಯೆ:ಎಂಇಡಿ166 ಕೆಯುಎಂ2023, ಬೆಂಗಳೂರು, ದಿನಾಂಕ:30.09.2023. ನಿರ್ದೇಶನವಿರುತ್ತದೆ. ಅದರಂತೆ, ಸದರಿಯವರಿಗೆ ಪರಿಹಾರ ಮೊತ್ತ ಒಟ್ಟು ರೂ.2,42,700/–ಗಳನ್ನು Prl. Senior civil Judge and CJM court, Hassan ಇವರ ಹೆಸರಿನಲ್ಲಿ (ಚೆಕ್ ಸಂಖ್ಯೆ:686790, ದಿನಾಂಕ:04.10.2023) ಪಾವತಿಸಲಾಗಿರುವುದನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಆಡಳಿತ ಮಂಡಳಿ ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>**ತೀರ್ಮಾನ:**<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ನ್ಯಾಯಾಲಯದ ನಿರ್ದೇಶನದಂತೆ ಶ್ರೀಮತಿ ರತ್ನಮ್ಮ W/o ಮಹದೇವರವರಿಗೆ ಪರಿಹಾರ ಮೊತ್ತ ಒಟ್ಟು ರೂ.2,42,700/–ಗಳನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ Prl. Senior civil Judge and CJM court, Hassan ಇವರಿಗೆ ಪಾವತಿಸಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 12 | ಹಿಮ್ಸ್ ಸಂಸ್ಥೆಯ ಬೋಧಕೇತರ ಸಿಬ್ಬಂದಿಗಳು ಪರಸ್ಪರ ವರ್ಗಾವಣೆ ಮೇರೆಗೆ ವರ್ಗಾವಣೆ ಹೊಂದಿದ್ದು, ಆಡಳಿತ ಮಂಡಳಿ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಸಂಸ್ಥೆಯ ಕರ್ತವ್ಯದಿಂದ ಬಿಡುಗಡೆ ಗೊಳಿಸಿರುವುದನ್ನು | ಹಿಮ್ಸ್ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಬೋಧಕೇತರ ಸಿಬ್ಬಂದಿಗಳು ಪರಸ್ಪರ ವರ್ಗಾವಣೆ ಮೇರೆಗೆ ಅನ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರದ ಆದೇಶದಂತೆ ವರ್ಗಾವಣೆ ಹೊಂದಿದ್ದು, ಸದರಿ ಸಿಬ್ಬಂದಿಗಳನ್ನು ಆಡಳಿತ ಮಂಡಳಿ ಸಭೆಯ ತೀರ್ಮಾನದ ಷರತ್ತಿಗೊಳಪಡಿಸಿ, ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಸಂಸ್ಥೆಯ ಕರ್ತವ್ಯದಿಂದ ಬಿಡುಗಡೆ ಮಾಡಿರುವುದನ್ನು ಸಂಸ್ಥೆಯ ನಿರ್ದೇಶಕರು ಆಡಳಿತ ಮಂಡಳಿ ಸಭೆಯ ಮುಂದೆ ವಿಷಯವನ್ನು ಮಂಡಿಸಿದರು. |

| ಕ್ರ ಸಂ | ಹೆಸರು | ಕರ್ತವ್ಯಕ್ಕೆ ಸೇರಿದ ದಿನಾಂಕ | ಕರ್ತವ್ಯದಿಂದ ಬಿಡುಗಡೆ ಯಾದ ದಿನಾಂಕ | ವರ್ಗಾವಣೆಗೊಂಡ ವೈದ್ಯಕೀಯ ಕಾಲೇಜಿನ ಹೆಸರು | ಷರಾ |
|---|---|---|---|---|---|



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| | | |
|---|---|---|
| | ಅನುಮೋದಿಸುವ ಬಗ್ಗೆ. | (ಕೆಳಗಿನ ಪಟ್ಟಿ) |

| | | | | | |
|---|---|---|---|---|---|
| 01 | ಮಹೇಶ್ ಕುಮಾರ್. ಹೆಚ್.ವಿ. ಪ್ರಯೋಗಾಲಯ ತಂತ್ರಜ್ಞರು, | 20.10.2011 | 13.07.2023 | ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ, ಸಂಸ್ಥೆ | ಭಾಗ್ಯ ಲಕ್ಷ್ಮಿ.ಎಲ್.ಎಸ್. ಪರಸ್ಪರ ವರ್ಗಾವಣೆ |
| 02 | ತೇಜೇಶ್ವರ ಎಂ.ಎಸ್. ಶುಶ್ರೂಷಾಧಿಕಾರಿಗಳು | 20.10.2011 | 23.03.2022 | ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ, ಸಂಸ್ಥೆ | ನೇರ ವರ್ಗಾವಣೆ |
| 03 | ಅನುಸೂಯಾ. ಎಸ್. ಕೆ. ಶುಶ್ರೂಷಾಧಿಕಾರಿಗಳು | 13.02.2017 | 03.06.2022 | ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ, ಸಂಸ್ಥೆ | ಪತಿ–ಪತ್ನಿ ಪ್ರಕರಣ |
| 04 | ವಿನುತ ಶುಶ್ರೂಷಾಧಿಕಾರಿಗಳು | 26.12.2016 | 13.07.2023 | ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ | ಪತಿ–ಪತ್ನಿ ಪ್ರಕರಣ |
| 05 | ಹರೀಶ್.ಹೆಚ್.ಆರ್. ಶುಶ್ರೂಷಾಧಿಕಾರಿಗಳು | 20.10.2011 | 02.08.2023 | ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ | ಮಂಜುನಾಥ್. ಎಸ್.ಎಲ್. ಪರಸ್ಪರ ವರ್ಗಾವಣೆ |
| 06 | ನಯನ ಎಸ್. ಎಸ್ ಶುಶ್ರೂಷಾಧಿಕಾರಿಗಳು | 21.12.2016 | 23.08.2023 | ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ, ಬೆಂಗಳೂರು | ವಿಶೇಷ ಪ್ರಕರಣ |
| 07 | ವೃದ್ಧಿ. ಸಿ. ಎಮ್. ಶುಶ್ರೂಷಾಧಿಕಾರಿಗಳು | 09.01.2017 | 23.11.2020 | ಗುಲ್ಬರ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರ್ಗಿ | ಪತಿ–ಪತ್ನಿ ಪ್ರಕರಣ |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಮೇಲ್ಕಂಡ ಸಿಬ್ಬಂದಿಗಳನ್ನು ಹಿಮ್ಸ್ ಸಂಸ್ಥೆಯಿಂದ ಅನ್ಯ ಸಂಸ್ಥೆಗಳಿಗೆ ವರ್ಗಾವಣೆ ಮಾಡಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.

| | | |
|---|---|---|
| 13 | ಹಿಮ್ಸ್ ಸಂಸ್ಥೆಯ ಬೋಧನಾ ಆಸ್ಪತ್ರೆ ಆವರಣದಲ್ಲಿ ನಂದಿನಿ ಮಳಿಗೆ (KMF) ತೆರೆಯಲು ಅನುಮತಿ ನೀಡುವಂತೆ ಕೋರಿರುವ ಬಗ್ಗೆ. | ಶ್ರೀ ಎಂ.ಪವನ್ ಕುಮಾರ್ ಬಿನ್ ಮೋಹನ್ ಕುಮಾರ್ ಇವರು ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಉದ್ಯಮಶೀಲತೆ & ಜೀವನೋಪಾಯ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ದಿನಾಂಕ:11–10–2023 ರಂದು ಮನವಿ ಸಲ್ಲಿಸಿ ಹಿಮ್ಸ್ ಸಂಸ್ಥೆಯ ಬೋಧನಾ ಆಸ್ಪತ್ರೆ ಆವರಣದಲ್ಲಿ ಆಸ್ಪತ್ರೆಗೆ ಬರುವ ರೋಗಿಗಳಿಗೆ ಮತ್ತು ಸಾರ್ವಜನಿಕರಿಗೆ ಸದಾಕಾಲ ನಂದಿನಿ ಹಾಲು ಮತ್ತು ಉತ್ಪನ್ನಗಳು ಲಭ್ಯವಾಗುವಂತೆ ನಂದಿನಿ ಮಳಿಗೆ (KMF)ಯನ್ನು ತೆರೆದು ಅನುಕೂಲ ಮಾಡಿಕೊಡುವುದರೊಂದಿಗೆ ಜೀವನೋಪಾಯಕ್ಕೆ ದಾರಿ |



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| | | ಮಾಡಿಕೊಡುವಂತೆ ಕೋರಿರುತ್ತಾರೆ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಸದರಿ ವಿಷಯವನ್ನು ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸುವಂತೆ ಪತ್ರ ಸಂಖ್ಯೆ:716/23, ದಿನಾಂಕ:06.11.2023ರಲ್ಲಿ ಸೂಚಿಸಿರುತ್ತಾರೆ.<br>ಹಾಗೂ<br>ವ್ಯವಸ್ಥಾಪಕ ನಿರ್ದೇಶಕರು, ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ ಹಾಸನ. ಇವರು ಆಸ್ಪತ್ರೆಯ ಆವರಣದಲ್ಲಿ (KMF)ಕ್ಷೀರ ಮಳಿಗೆಯನ್ನು ತೆರೆಯಲು ಸ್ಥಳ ಮಂಜೂರಾತಿ ನೀಡಬೇಕೆಂದು ದಿನಾಂಕ:14.12.2022.ರಂದು ಸಲ್ಲಿಸಿರುವ ಪತ್ರದ ವಿಷಯವನ್ನು ಸಂಸ್ಥೆಯ ನಿರ್ದೇಶಕರು ಆಡಳಿತ ಮಂಡಳಿ ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>**ತೀರ್ಮಾನ:**<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸಂಸ್ಥೆಯ ಆವರಣದಲ್ಲಿ ರೋಗಿಗಳಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು ಕೆ.ಟಿ.ಟಿ.ಪಿ ನಿಯಮಾನುಸಾರ ಇ–ಟೆಂಡರ್ ಕರೆದು ಹೆಚ್ಚು ಬಾಡಿಗೆ ನಮೂದಿಸುವ ಬಿಡ್‌ದಾರರಿಗೆ ನಂದಿನಿ ಮಳಿಗೆಯನ್ನು (KMF) ತೆರೆದು ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಮಾಡಿಕೊಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 14 | ಹಿಮ್ಸ್ ಸಂಸ್ಥೆಯ ಆವರಣದಲ್ಲಿ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರ ತೆರೆಯಲು ಅನುಮತಿ ನೀಡುವಂತೆ ಶ್ರೀ.ಎಸ್.ಬಿ. ಅಶೋಕ್, ಚನ್ನರಾಯಪಟ್ಟಣ ಇವರು ಸಲ್ಲಿಸಿರುವ ಮನವಿ ಪತ್ರದ ಬಗ್ಗೆ. | ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಗಳಿಗೆ ಬರುವ ಎಲ್ಲಾ ಒಳ–ಹೊರ ರೋಗಿಗಳಿಗೆ ಅವಶ್ಯಕವಿರುವ ಔಷಧಿಗಳು ಮತ್ತು ರಾಸಾಯನಿಕಗಳನ್ನು ಇ–ಟೆಂಡರ್ ಮೂಲಕ ಖರೀದಿಸಿ, ಎಲ್ಲಾ ಔಷಧಿಗಳನ್ನು ಬಹುತೇಕ ವಿತರಿಸಲಾಗುತ್ತಿದೆ. ಆದಾಗ್ಯೂ ಕೆಲವು ತುರ್ತು ಸಂದರ್ಭಗಳಲ್ಲಿ ಅಪರೂಪಕ್ಕೊಮ್ಮೆ ವೈದ್ಯರು ಬರೆಯುವ ಔಷಧಿಗಳು ಆ ತಕ್ಷಣದಲ್ಲಿ ಲಭ್ಯವಿಲ್ಲದಿದ್ದಾಗ ರೋಗಿಗಳು ಖಾಸಗಿ ಮೆಡಿಕಲ್ ಶಾಪ್‌ಗೆ ತೆರಳದೆ ಅತ್ಯಂತ ಕಡಿಮೆ ಸಮಯದಲ್ಲಿ ಮತ್ತು ಕಡಿಮೆ ಖರ್ಚಿನಲ್ಲಿ ಜನರಿಕ್ ಔಷಧಿಗಳನ್ನು ಖರೀದಿಸಲು ಅನುಕೂಲವಾಗುವಂತೆ ಈ ಸಂಸ್ಥೆಯ ಆವರಣದಲ್ಲಿ ಈಗಾಗಲೇ 2012 ರಿಂದ ಜನತಾ ಬಜಾರ್ ವತಿಯಿಂದ ಜನರಿಕ್ ಮಳಿಗೆ ಹಾಗೂ 2015 ರಿಂದ ಹೆಚ್.ಎಲ್.ಎಲ್.ಲೈಫ್ ಕೇರ್ ಲಿಮಿಟೆಡ್ ವತಿಯಿಂದ ಜನೌಷಧಿ ಮಳಿಗೆ ಹಾಗೂ ಫೆಬ್ರವರಿ–2023 ರಂದು ಎಸ್.ಎಮ್.ವಿ.ಫಾರ್ಮವತಿಯಿಂದ ಇನ್ನೊಂದು ನೂತನ ಜೆನರಿಕ್ ಔಷಧಿ ಮಳಿಗೆಗನ್ನು ಸಹ ಪ್ರಾರಂಭಿಸಲಾಗಿದೆ. ಈಗಾಗಲೇ ಪ್ರಾರಂಭಿಸಲಾಗಿರುವ 03 ಜನರಿಕ್ ಔಷಧಿ ಮಳಿಗೆಗಳನ್ನು ಸರ್ಕಾರದ ಆಡಳಿತ ಮಂಡಳಿಯ ನಿರ್ದೇಶನದಂತೆಯೇ ಮಳಿಗೆಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆ.<br>ಮುಂದುವರಿದು ಶ್ರೀ.ಎಸ್.ಬಿ.ಅಶೋಕ್,ಚನ್ನರಾಯಪಟ್ಟಣ, ಹಾಸನ ಇವರು ಶ್ರೀ.ಎಸ್.ಬಿ.ಅಶೋಕ್ ಬಿನ್ ಎಸ್.ಕೆ.ಬಸವೇಗೌಡ, ಸಸಲೂಪುರ ಕೊಪ್ಪಲು, ಕಸಬಾ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಇವರ ಪತ್ರ ದಿನಾಂಕ :22.05.2023 ಮತ್ತು 20.07.2023.ರಲ್ಲಿ ಈ ಹಿಂದೆ ಚನ್ನರಾಯಪಟ್ಟಣ ತಾಲ್ಲೂಕು ಆಸ್ಪತ್ರೆಯ ಆವರಣದಲ್ಲಿ ಜನೌಷಧಿ ಮಳಿಗೆ ತೆರಯಲು ಅನುಮತಿ ನೀಡಲಾಗಿತ್ತು. ತದನಂತರ ಕಾರಣಾಂತರಗಳಿಂದ ಎಂ.ಎಸ್.ಐ.ಎಲ್.ಗೆ ಆದೇಶ ನೀಡಲಾಗಿದ್ದುದರ ವಿರುದ್ಧ ನಾನು ಉಚ್ಛನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ, |



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| | | ನ್ಯಾಯಾಲಯದಿಂದ It would suffice by directing responding to consider putitioner's case for granting permission for opening 'Janoushadhi Kendra' in any other hospital/place either in Hassan or nearby District,in case same were open for establishment by private entity other than MSIL ಎಂದು ಆದೇಶವಾಗಿರುವುದರಿಂದ ಈ ಸಂಸ್ಥೆಯ ಬೋಧಕ ಆಸ್ಪತ್ರೆಯ ಆವರಣದಲ್ಲಿ ಜನೌಷಧಿ ಮಳಿಗೆ ತೆರಯಲು ಅನುಮತಿ ನೀಡಬೇಕಾಗಿ ಈ ಸಂಸ್ಥೆಗೆ ಮತ್ತು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಸರ್ಕಾರದಿಂದ ಸರ್ಕಾರದ ಪತ್ರ ಸಂಖ್ಯೆ:MED /124/KUM /2023, ಬೆಂಗಳೂರು, ದಿನಾಂಕ:21.07.2023 ಮತ್ತು 19.10.2023. ರಲ್ಲಿ ಈ ಸಂಸ್ಥೆಯ ಆವರಣದಲ್ಲಿ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರ ತೆರೆಯಲು ಅನುಮತಿ ನೀಡುವ ಬಗ್ಗೆ ಸಲ್ಲಿಸಿರುವ ಮನವಿ ಪತ್ರ/ಸ್ವೀಕೃತಿಯನ್ನು ನಿಯಮಾನುಸಾರ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ಸಂಬಂಧಿಸಿದವರಿಗೆ ಹಿಂಬರಹ/ಉತ್ತರವನ್ನು ನೀಡುವಂತೆ ಮತ್ತು ಅಗತ್ಯವಿದ್ದಲ್ಲಿ ಮಾತ್ರ ಸರ್ಕಾರಕ್ಕೆ ನಿರ್ದಿಷ್ಟ ಅಭಿಪ್ರಾಯದ ವರದಿ/ಪ್ರಸ್ತಾವನೆಯನ್ನು ಮೂಲ ಸ್ವೀಕೃತಿಯೊಂದಿಗೆ ಸಲ್ಲಿಸುವಂತೆ ಉಲ್ಲೇಖಿತ ಪತ್ರದಲ್ಲಿ ತಮ್ಮಿಂದ ನಿರ್ದೇಶಿಸಲಾಗಿತ್ತು, ಅದರಂತೆ ಈ ಕಛೇರಿಯ ಈ ಸಮ ಸಂಖ್ಯೆ ಪತ್ರ ದಿನಾಂಕ: 16.08.2023.ರಲ್ಲಿ ಶ್ರೀ.ಎಸ್.ಬಿ.ಅಶೋಕ್, ಚನ್ನರಾಯಪಟ್ಟಣ, ಹಾಸನ ಇವರಿಗೆ ದಿನಾಂಕ:16.08.2023 ರಂದು ಈ ಸಂಸ್ಥೆಯ ಆವರಣದಲ್ಲಿ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರ ತೆರೆಯಲು ಅನುಮತಿ ನೀಡುವ ಬಗ್ಗೆ ಬೈಲಾ ನಿಯಮಾನುಸಾರ ಈ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ, ಆಡಳಿತ ಮಂಡಳಿಯ ತೀರ್ಮಾನದಂತೆ ಕ್ರಮವಹಿಸಲಾಗುತ್ತದೆಂದು ಹಿಂಬರಹ ನೀಡಲಾಗಿರುತ್ತದೆ. ಆದುದರಿಂದ ಸದರಿ ವಿಷಯದ ಬಗ್ಗೆ ಸಂಸ್ಥೆಯ ನಿರ್ದೇಶಕರು ಆಡಳಿತ ಮಂಡಳಿ ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>**ತೀರ್ಮಾನ:**<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಗಳಲ್ಲಿ ಔಷಧಿಗಳನ್ನು ಉಚಿತವಾಗಿ ನೀಡಬೇಕಾಗಿರುವುದು ಸರ್ಕಾರದ ಮೂಲ ಉದ್ದೇಶವಾಗಿದ್ದು, ಜೊತೆಗೆ ಸಂಸ್ಥೆಯ ಆವರಣದಲ್ಲಿ ಈಗಾಗಲೇ ಜೆನೆರಿಕ್ ಮಳಿಗೆಗಳು ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಸದರಿ ಶ್ರೀ.ಎಸ್.ಬಿ.ಅಶೋಕ್, ಚನ್ನರಾಯಪಟ್ಟಣ, ಹಾಸನರವರ ಮನವಿಗೆ ಮನ್ನಣೆ ನೀಡದಿರಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 15 | ಹಿಮ್ಸ್ ಸಂಸ್ಥೆಯ ಆವರಣದಲ್ಲಿ ಪ್ರಾರಂಭಿಸಲಾಗಿರುವ ನೂತನ ಜೆನರಿಕ್ ಮಳಿಗೆ ಬಗ್ಗೆ ಮಾನ್ಯ ಶಾಸಕರು, ಹಾಸನ ವಿಧಾನಸಭಾ ಕ್ಷೇತ್ರ, ಹಾಸನ ಇವರು ಆಕ್ಷೇಪಿಸಿರುವ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಬರುತ್ತಿರುವ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಹಾಗೂ ನೂತನವಾಗಿ ನಿರ್ಮಿಸುತ್ತಿರುವ 450 ಹಾಸಿಗೆಗಳ ಹೈಟೆಕ್ ಆಸ್ಪತ್ರೆ ಕಟ್ಟಡ ಹಾಗೂ 250 ಹಾಸಿಗೆಗಳ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಗಳ ಹಿನ್ನಲೆಯಲ್ಲಿ ಹಾಗೂ ಜಿಲ್ಲೆಯ ಬಡರೋಗಿಗಳ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಹಿಂದಿನ ಹಾಸನ ವಿಧಾನ ಸಭಾ ಕ್ಷೇತ್ರದ ಶಾಸಕ ಮನವಿಯಂತೆ ಇನ್ನೊಂದು ನೂತನ ಜೆನರಿಕ್ ಔಷಧಿ ಮಳಿಗೆಯನ್ನು ಪ್ರಾರಂಭಿಸುವ ಬಗ್ಗೆ ಅನುಮತಿ ಕೋರಿ ದಿನಾಂಕ:24.01.2020 ಮತ್ತು ದಿನಾಂಕ:18.11.2020ರಂದು ಏಕಕಡತದಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ |



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| | | |
|---|---|---|
| | ವಿಷಯದ ಬಗ್ಗೆ. | ಸಲ್ಲಿಸಲಾಗಿತ್ತು.<br>ಸರ್ಕಾರದ ಪತ್ರ ಸಂಖ್ಯೆ:MED /33/KUM /2020, ಬೆಂಗಳೂರು ರವರ ಪತ್ರ ದಿನಾಂಕ:29.01.2021. ದಿನಾಂಕ:30.11.2022 , ಕಾರ್ಯಪಾಲಕ ಇಂಜಿನಿಯರ್,ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ರವರ ಪತ್ರ ಸಂಖ್ಯೆ:4589/2022-23, ದಿನಾಂಕ:17-02-2023.ರಂದು ನಡೆದ 34 ನೇ ಆಡಳಿತ ಮಂಡಳಿ ಸಭೆಯ ನಡವಳಿಗಳಲ್ಲಿ ಈ ಸಂಸ್ಥೆಯ ಆವರಣದಲ್ಲಿ ನೂತನ ಜೆನರಿಕ್ ಔಷಧಿ ಮಳಿಗೆ ಸ್ಥಾಪನೆಯ ಬಗ್ಗೆ ಸೂಕ್ತ ಮಾನದಂಡಗಳನ್ನು ರೂಪಿಸಿಕೊಂಡು ಪಾರದರ್ಶಕವಾಗಿ ಆಯ್ಕೆ ಮಾಡಿಕೊಂಡು ಆಡಳಿತ ಮಂಡಳಿ ಸಭೆಯ ಮುಂದೆ ಪ್ರಸ್ತಾಪಿಸಿ, ಅನುಮತಿ ಪಡೆದುಕೊಳ್ಳುವಂತೆ ನಿರ್ದೇಶಿಸಿದ್ದುದರಿಂದ ಸದರಿ ವಿಷಯವನ್ನು ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ಕೈಗೊಳ್ಳಲು ದಿನಾಂಕ:30.11.2022 ರಂದು ನಡೆದ 34 ನೇ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಜೆನರಿಕ್ ಔಷಧಿ ಮಳಿಗೆಯನ್ನು ಸ್ಥಾಪಿಸಲು ಮೆ.ವಿ.ಎಮ್ ಫಾರ್ಮ್, ಹಾಸನ ಇವರಿಗೆ ಅವಕಾಶ ನೀಡುವಂತೆ ಹಾಸನ ವಿಧಾನ ಸಭಾ ಕ್ಷೇತ್ರದ ಶಾಸಕರು, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಬರೆದಿರುವ ಪತ್ರದ ಕುರಿತಂತೆ ವಿವರವಾಗಿ ಚರ್ಚಿಸಲಾಯಿತು. ಈ ಬಗ್ಗೆ ಸದರಿ ಸಂಸ್ಥೆಯವರು ಕರ್ನಾಟಕ ಸರ್ಕಾರದ ಡ್ರಗ್ಸ್ ಕಂಟ್ರೋಲ್ ವಿಭಾಗದಿಂದ ಪರವಾನಿಗೆ ಪತ್ರ ಹೊಂದಿದ್ದಲ್ಲಿ ಜೆನರಿಕ್ ಔಷಧಿಗಳನ್ನು ಮಾತ್ರ ಮಾರಾಟ ಮಾಡುವ ಷರತ್ತಿನ ಮೇರೆಗೆ ಅನುಮೋದನೆ ನೀಡಲು ಹಾಗೂ ಮುಂದೆ ಯಾವುದೇ ಸಂದರ್ಭದಲ್ಲಿ ಸದರಿ ಷರತ್ತಿನ ಉಲ್ಲಂಘನೆಯಾದಲ್ಲಿ ಪರವಾನಗಿಯನ್ನು ಕೂಡಲೇ ರದ್ದುಪಡಿಸುವ ಷರತ್ತಿಗೆ ಒಳಪಟ್ಟು ಸದರಿ ಪ್ರಸ್ತಾವನೆಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಗಿದೆ.<br>ಸದರಿ ಸಭೆಯ ತೀರ್ಮಾನದಂತೆ ಈ ಸಂಸ್ಥೆಯ ಆವರಣದಲ್ಲಿ ಜೆನರಿಕ್ ಔಷಧಿ ಮಳಿಗೆಯನ್ನು ಮೆ.ವಿ.ಎಮ್ ಫಾರ್ಮ್, ಹಾಸನ ಇವರು ಪ್ರಾರಂಭಿಸಲು 4ಮೀ X4ಮೀ(16.00ಚ.ಮೀ.)ಅಳತೆಯಲ್ಲಿ ನೆಲದ ನಿವೇಶನಕ್ಕೆ (ಖಾಲಿ ನಿವೇಶನ) ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ ಇವರು 2022-23ನೇ ಸಾಲಿನಿಂದ ಪ್ರತಿ ತಿಂಗಳಿಗೆ ರೂ.3750.00/-ಪಾವತಿಸಬೇಕಾದ ಬಾಡಿಗೆ ಮೊತ್ತವನ್ನು ನಿಗದಿಪಡಿಸಲಾಗಿರುತ್ತದೆ. ಮಾನ್ಯ ಶ್ರೀ ಸ್ವರೂಪ್ ಪ್ರಕಾಶ್,ಶಾಸಕರು, ಹಾಸನ ವಿಧಾನ ಸಭಾ ಕ್ಷೇತ್ರ, ಹಾಸನ ಇವರ ಪತ್ರ ದಿನಾಂಕ:24.08.2023. ಆದುದರಿಂದ ಹಿಮ್ಸ್ ಸಂಸ್ಥೆ ಮತ್ತು ಮೆ.ವಿ.ಎಮ್ ಫಾರ್ಮ್,ಹಾಸನ ಇವರ ನಡುವೆ ಬಾಡಿಗೆ ಒಪ್ಪಂದವನ್ನು ದಿನಾಂಕ:20.02.2023ರಂದು ಕ್ರಮ ಸಂಖ್ಯೆ 1 ರಿಂದ 15 ರವರೆಗೆ ಷರತ್ತುಗಳನ್ನು (ಬಾಡಿಗೆ ಒಪ್ಪಂದದ ಪ್ರತಿ ಲಗತ್ತಿಸಿದೆ.) ವಿಧಿಸಿ, ನಿಯಮಾನುಸಾರ ಅನುಮತಿ ನೀಡಲಾಗಿರುತ್ತದೆ.<br>ಮುಂದುವರಿದು ಮಾನ್ಯ ಶಾಸಕರು, ಹಾಸನ ವಿಧಾನಸಭಾ ಕ್ಷೇತ್ರ, ಹಾಸನ ಇವರು ಈ ಸಂಸ್ಥೆಯ ಆವರಣದಲ್ಲಿ ನೂತನ ಜೆನರಿಕ್ ಔಷಧಿ ಮಳಿಗೆಯನ್ನು ತೆರೆದಿರುವುದು ಮೇಲ್ನೋಟಕ್ಕೆ ಅಕ್ರಮ ನಡೆದಿರುವುದು ಕಂಡುಬಂದಿರುವುದರಿಂದ ಈ ಬಗ್ಗೆ ಪರಿಶೀಲಿಸಿ, ನಿಯಮಾನುಸಾರ ಇ-ಪ್ರಕ್ಯೂರ್ ಮೂಲಕ ಹಂಚಿಕೆ ಮಾಡಬೇಕಾಗಿ ದಿನಾಂಕ:24.08.2023ರ ಪತ್ರದಲ್ಲಿ ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,ಸಚಿವರು, ಕರ್ನಾಟಕ ಸರ್ಕಾರ ಇವರಿಗೆ ಕೋರಿರುತ್ತಾರೆ. ಸರ್ಕಾರದಿಂದ ಸದರಿಯವರ ಮನವಿ ಪತ್ರವನ್ನು ನಿಯಮಾನುಸಾರ |



ನಿರ್ದೇಶಕರು / ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ

| | | |
|---|---|---|
| | | ಪರಿಶೀಲಿಸಿ, ಸೂಕ್ತಕ್ರಮ ಕೈಗೊಳ್ಳುವಂತೆ ಸರ್ಕಾರದ ಪತ್ರ ಸಂಖ್ಯೆ:MED /124/KUM /2023, ಬೆಂಗಳೂರುರವರ ಪತ್ರ ದಿನಾಂಕ:19.10.2023. ರಲ್ಲಿ ನಿರ್ದೇಶಿಸಲಾಗಿದೆ. ಆದುದರಿಂದ ಸದರಿ ವಿಷಯದ ಬಗ್ಗೆ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ಕೈಗೊಳ್ಳಲು ಸಂಸ್ಥೆಯ ನಿರ್ದೇಶಕರು ಆಡಳಿತ ಮಂಡಳಿ ಸಭೆಯ ಮುಂದೆ ವಿಷಯವನ್ನು ಮಂಡಿಸಿದರು.<br>**ತೀರ್ಮಾನ:**<br>ಮೆ.ವಿ.ಎಮ್ ಫಾರ್ಮ್, ಹಾಸನ ಇವರಿಗೆ ಜೆನರಿಕ್ ಔಷಧಿ ಮಳಿಗೆಯನ್ನು ಸ್ಥಾಪಿಸಲು ಈ ಹಿಂದೆ ಆಡಳಿತ ಮಂಡಳಿ ಸಭೆಯಲ್ಲಿ ಅನುಮತಿ ನೀಡಿರುವುದನ್ನು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಸದರಿ ಔಷಧಿ ಮಳಿಗೆಯ ವಾರ್ಷಿಕ ನವೀಕರಣದ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲು ಸಂಸ್ಥೆಯ ನಿರ್ದೇಶಕರಿಗೆ ಸೂಚನೆ ನೀಡಲಾಯಿತು.<br>'ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು' |

(ಡಾ.ಬಿ.ಸಿ.ರವಿಕುಮಾರ್)
ನಿರ್ದೇಶಕರು, ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.
ನಿರ್ದೇಶಕರು / ಪ್ರಾಂಶುಪಾಲರು
**ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ**
**ಹಾಸನ**

(ಡಾ.ಬಿ.ಎಲ್. ಸುಜಾತ ರಾಥೋಡ್)
ನಿರ್ದೇಶಕರು,
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಹಾಗೂ ಸದಸ್ಯರು,
ಆಡಳಿತ ಮಂಡಳಿ ಸಭೆ,
ಹಿಮ್ಸ್, ಹಾಸನ.

(ಶ್ರೀ.ಜಾವೇದ್ ಅಖ್ತರ್. ಭಾ.ಆ.ಸೇ.,)
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು,
ವೈದ್ಯಕೀಯ ಶಿಕ್ಷಣ ಇಲಾಖೆ,
ಕರ್ನಾಟಕ ಸರ್ಕಾರ
ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ,
ಹಿಮ್ಸ್, ಹಾಸನ.

(ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್)
ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ,
ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.